

# ಕೆನನ್‌ಬಾಲ್ ಟ್ರೀ

■ ಗೀತಸದಾ, ಮೋಂತಿಮಾರು



'ಲೆಥಿಡೇಸಿ' ಕುಟುಂಬಕ್ಕೆ ಸೇರಿದ ಈ ಹೂವಿನ ಮರಕ್ಕೆ ಆಂಗ್ಲಭಾಷೆಯಲ್ಲಿ ಕೆನನ್‌ಬಾಲ್ ಟ್ರೀ ಎನ್ನುತ್ತಾರೆ. ಇದನ್ನು ಸ್ಥಳೀಯವಾಗಿ ನಾವು ಶಿವಲಿಂಗ ಪುಷ್ಪ, ನಾಗಲಿಂಗಂ, ಶಿವಕಮಲ, ನಾಗಮಲ್ಲಿ, ಮಲ್ಲಿಕಾರ್ಜುನ ಪುಷ್ಪ ಮುಂತಾದ ಹೆಸರುಗಳಿಂದಲೂ ಕರೆಯುತ್ತೇವೆ. ಇದರ ಸಸ್ಯಶಾಸ್ತ್ರೀಯ ಹೆಸರು– ಕೌರಾಪಿಟ್ ಜಿಯನೆಂಸಿಸ್.

ಹಳದಿ ಮಿಶ್ರಿತ ಕೆಂಪು ಬಣ್ಣದ ಸುಂದರ ದಳಗಳಿಂದ ಕೂಡಿರುವ ಈ ಹೂವಿನ ಮಧ್ಯಭಾಗವು ನಾಗರ ಹೆಡೆ ಬಿಚ್ಚಿರುವಂತೆ ವಿಶಿಷ್ಟ ವಿನ್ಯಾಸವನ್ನು ಹೊಂದಿದೆ. ಹಸಿರು ಎಲೆಗಳ ನಡುವೆ ಮರದ ಬಿಳಲುಗಳಲ್ಲಿ ಮೊಗ್ಗುಗಳು, ಸುಂದರ ಹೂವುಗಳು ಹಾಗೂ ದೊಡ್ಡ ಗಾತ್ರದ ಕಾಯಿಗಳು ತುಂಬಿದ ಮರವನ್ನು ನೋಡುವುದೇ ಒಂದು ಅದ್ಭುತ ಸೌಂದಾರ್ಯನುಭವ. ತೀಕ್ಷ್ಣ ಸುವಾಸನೆ ಮತ್ತು ಆಕರ್ಷಕ ವಿನ್ಯಾಸದಿಂದ ಎಲ್ಲರನ್ನೂ ತನ್ನತ್ತ ಸೆಳೆಯುವ ಈ ಹೂವುಗಳು ಮರದಲ್ಲಿ ತುಂಬಿದಾಗ ಮಕರಂದವನ್ನು ಹೀರುವ ದುಂಬಿ ಹಾಗೂ ಜೇನ್ನೊಣಗಳಿಗೆ ಹಬ್ಬ.

ದಕ್ಷಿಣ ಅಮೇರಿಕಾ ಇದರ ಮೂಲ. ಏಷ್ಯಾದ ಶಿವ ದೇವಾಲಯಗಳಲ್ಲಿ ಹಾಗೂ ಬೌದ್ಧ ದೇವಾಲಯಗಳಲ್ಲಿ ವಿಶೇಷವಾಗಿ ಈ ಮರದ ಹೂವುಗಳು ದೇವರ ಪೂಜೆಗೆ ಬಳಕೆಯಾಗುತ್ತಿದೆ. ಸಾಮಾನ್ಯವಾಗಿ ಮಧ್ಯಮ ಗಾತ್ರವಿರುವ ಮರಗಳಲ್ಲಿ ಕಿತ್ತಳೆ ಹಾಗೂ ಕೆಂಪು ಬಣ್ಣದ ಹೂವುಗಳನ್ನು ಕಾಣಬಹುದು. ಮರದ ಕಾಯಿಗಳು ಸುಲಿದ ತೆಂಗಿನಕಾಯಿಯ ಗಾತ್ರವನ್ನು ಹೊಂದಿದ್ದು ಮರದ ಬುಡದ ಭಾಗದಿಂದಲೇ ಗೊಂಚಲಿನ ರೂಪದಲ್ಲಿ ಕಂಡುಬರುತ್ತವೆ.

ಹಲವಾರು ಔಷಧೀಯ ಗುಣಗಳನ್ನು ಹೊಂದಿರುವ ಈ ಮರದ ಎಲೆಗಳು ಫಂಗಸ್ ನಿರೋಧಕ ಮತ್ತು ಬ್ಯಾಕ್ಟೀರಿಯ ನಿರೋಧಕ ಗುಣಗಳನ್ನು ಹೊಂದಿವೆ. ಮರದ ಎಲೆಯಿಂದ ತಯಾರಿಸಿದ ಕಷಾಯವು ಚರ್ಮ ಸಂಬಂಧಿ ರೋಗಗಳ ನಿವಾರಣೆಗೆ ಹಾಗೂ ಮಲೇರಿಯಾ ಶಮನಕ್ಕೆ ಸೂಕ್ತ ಔಷಧಿ. ಹೂವುಗಳನ್ನು ವಾಂತಿ–ಬೇಧಿ, ಅಜೀರ್ಣ ಮತ್ತು ಶೀತದ ಹಲವು ತೊಂದರೆಗಳ ಪರಿಹಾರಕ್ಕಾಗಿ ಉಪಯೋಗಿಸುತ್ತಾರೆ. ಕಾಯಿಯ ಒಳಭಾಗ ಗಾಯಗಳನ್ನು ವಾಸಿಮಾಡಲು ಉಪಯೋಗಕ್ಕೆ ಬರುತ್ತದೆ ಎನ್ನುತ್ತಾರೆ ಆಯುರ್ವೇದ ಪಂಡಿತರು.

ಈ ಮರವನ್ನು ವಿಶೇಷವಾಗಿ ದೇವಾಲಯಗಳಲ್ಲಿ, ನಾಗಬನ, ನಾಗಸನ್ನಿಧಿ ಮತ್ತು ಬದಿಗಳಲ್ಲಿ ಬೆಳೆಸುತ್ತಾರೆ. ಬೀಜ ಮತ್ತು ಕಸಿ ಕಟ್ಟುವಿಕೆಯಿಂದ ಸಸ್ಯಾಭಿವೃದ್ಧಿ ಮಾಡಬಹುದು. ಸಾಮಾನ್ಯವಾಗಿ ಮಳೆಗಾಲ ಮುಗಿದ ಕೂಡಲೇ ಈ ಮರಗಳಲ್ಲಿ ಅದ್ಭುತ ಸೌಂದರ್ಯದ ಹೂವುಗಳನ್ನು ಕಂಡು ಆನಂದಿಸಬಹುದು. ಹೂವುಗಳ ನಡುವೆ ಕಾಣುವ ಇದರ ಕಾಯಿಗಳೂ ವಿಶೇಷವಾಗಿ ಗಮನ ಸೆಳೆಯುತ್ತವೆ.